ಶ್ರೀ ಎಂ. ಎಸ್. ಕೃಷ್ಣನ್.— ಹೋಟೆಲ್ ಕಾರ್ಮಿಕರ ವಿಷಯದಲ್ಲಿ ಮಂತ್ರಿಗಳು ಉತ್ತರ ಕೊಟ್ಟರು. ಹೋಟೆಲ್ ಕಾರ್ಮಿಕರಿಗೆ ಕೆಲಸದ ವೇಳೆಯನ್ನು ಜಾಸ್ತಿ ಮಾಡಿದ್ದಾರೆಂದು ಉತ್ತರ ಕೊಟ್ಟಿದಾ ರೆ. ಕೆಲಸದ ವೇಳೆ ಮಾತ್ರವಲ್ಲ, ಅವರಿಗೆ ಕೆಲಸದ ಭದ್ರತೆ ಕೂಡ ಇಲ್ಲ. ಯಾವುದೇ ರೀತಿಯ ಕಾನೂನು ಅವರಿಗೆ ಅನ್ವಯಿಸುವುದಿಲ್ಲ. They are one of the worst exploited sections of workers. ಆದ್ದರಿಂದ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ಕೆಲವು ರಾಜ್ಯ ಗಳಲ್ಲಿ ಹೋಟೆಲ್ ಕಾರ್ಮಿಕರ ಬಗ್ಗೆ ಅಗಾಧಬಿತ್ತಿ ಕಾರ್ಮಿಕರು ಮತ್ತಿತರ ಕಾರ್ಮಿಕರ ಪರಿಸ್ಥಿತಿಯನ್ನು ಕಂಡುಹಿಡಿಯುವುದಕ್ಕೆ ಸರ್ವೆ ಮಾಡಿ ಒಂದು ಕಾನೂನನ್ನು ಮಹಾರಾಷ್ಟ್ರ ಸರ್ಕಾರದವರು ಮಾಡಿದ್ದಾರೆ. ನಮ್ಮ ಸರ್ಕಾರ ಕೂಡ ಅವರ ಪರಿಸ್ಥಿತಿ ಏನೆಂಬುದನ್ನು ಕಂಡುಕೊಳ್ಳಲು ಒಂದು ವರದಿಯನ್ನು ಕೊಡುವುದಕ್ಕೆ ಸಮಿತಿ ಮಾಡಿ ವರದಿ ತರಿಸಿಕೊಂಡು ಅದರ ಆಧಾರದ ಮೇಲೆ ಒಂದು ಕಾನೂನಂ ತೆಗೆದುಕೊಂಡು ಬರುತ್ತೀರಾ ?

SRI AZEEZ SAIT.— I was about to say about Maharashtra. The Maharashtra Government has got certain policy for the hotel workers. They have classified the hotels as A, B. C. etc. I have assured that I will discuss the problem and appoint a Committee to go into the problem of Hotel Workers and their living conditions. Most of the hotel workers live in hotels all the twenty four hours. They do not have separate places to live, they do not have good sanitary conditions, they have no bathroom to take bath etc. The conditions in the kitchen of small hotels and the attendants are bad. Even the customers feel it while they enter into the hotels. So problems are there. What my friend has suggested are most welcome. I will consider this fact and see the Government appoints such a Committee and go into the various aspects of welfare measures to be taken as in other States and see what could be done in the matter.

ಶ್ರೀ ವಿ. ಧನಂಜಯಕುಮಾರ್.— ಸ್ವಾಮಿ, ಮಂಗಳೂರು ನಗರದಲ್ಲಿರುವ ಬಾಂಬೆ ಲಕ್ಕಿ ಹೋಟೆಲ್‌ನಲ್ಲಿರುವ ನೌಕರರಿಗೆ ಒಂದು ವರ್ಷದಿಂದ ಆ ಹೋಟೆಲ್ ಮಾಲೀಕರು ಕರುಕುಳ ಕೊಡು ತ್ತಿದ್ದಾರೆ. ಈ ವಿಷಯವನ್ನು ಸಂಬಂಧ ಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅದಕ್ಕಾಗಿಯೇ ಈ ಒಂದು ಹೋಟೆಲ್ ಅನ್ನು ಕುರಿತು ಪರ್ಟಿಕ್ಯುಲರ್ ಆಗಿ ಈ ಪ್ರಶ್ನೆ ಕಳಂಹಿಸಿದ್ದು.

ಉಪಾಧ್ಯಕ್ಷರಂ.— ಒಂದಕ್ಕೊಂದಕ್ಕೂ ಸಂಬಂಧವಿಲ್ಲವಲ್ಲ. ನೀವು ಪ್ರಶ್ನೆ ಕಳುಹಿಸಿದ್ದು ಬೇರೆ. ಇಲ್ಲಿ ಕೇಳುವುದು ಬೇರೆಯಾಗಿದೆ, ಒಂದಕ್ಕೊಂದಕ್ಕೆ ಸಂಬಂಧವಿಲ್ಲ.

ಶ್ರೀ ಅಜೀಜ್‌ಸೇಟ್.— ಮಾನ್ಯ ಸದಸ್ಯರ ಭಾವನೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. I think the hon. member has brought a novel idea. But it relates to one individual hotel. I take notice of it.

ರೇಷ್ಮೆಯ ಆಮದು ಹಾಗೂ ರೇಷ್ಮೆ ಕೃಷಿ ಅಧ್ಯಯನಕ್ಕಾಗಿ ಹೊರದೇಶಗಳಿಗೆ ರೇಷ್ಮೆ ಕೃಷಿಕರನ್ನು ಕಳುಹಿಸುವುದನ್ನು ನಿಷೇಧಿಸುವುದು

೫೧ ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ).— ಕೈಗಾರಿಕಾ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ವಿಶ್ವ ಬ್ಯಾಂಕಿನ ನೆರವಿನಿಂದ ರೇಷ್ಮೆ ಕೃಷಿ ಅಭಿವೃದ್ಧಿಯಾಗುತ್ತಿರುವ ಸಮಯದಲ್ಲಿ ಹೊರ ದೇಶಗಳಿಂದ ರೇಷ್ಮೆಯನ್ನು ಆಮದು ಮಾಡಿಕೊಂಡು ನಮ್ಮ ಉತ್ಪಾದನೆಗೆ ಧಕ್ಕೆಯಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ,

(ಆ) ಮೂಲ ಉತ್ಪಾದಕರಾದ ರೈತರಿಗೆ ಬೆಲೆ ಕಡಿಮೆಯಾಗಿ ರೇಷ್ಮೆ ಕೃಷಿ ಕ್ಷೀಣಿಸುತ್ತಿರುವ ಕಠಿಣ ಪದ್ಧತಿಯು ಸರಕಾರದವರಿಗೆ ಗೊತ್ತಿದೆಯೆ.

(ಇ) ಹಾಗಿದ್ದಲ್ಲಿ ಕೇಂದ್ರ ಸರಕಾರವನ್ನು ಆಮದು ಮಾಡುವ ರೇಷ್ಮೆಯನ್ನು ನಿಲ್ಲಿಸುವಂತೆ ಮನವಿ ಮಾಡಲು ಸರಕಾರದವರು ಉದ್ದೇಶಿಸಿರುವರೇ,

(ಈ) ಜಪಾನ್ ಮತ್ತು ಇತರೆ ಹೊರದೇಶಗಳಿಗೆ ರೇಷ್ಮೆ ಕೃಷಿ ಅಧ್ಯಯನಕ್ಕಾಗಿ ಅಧಿಕಾರ ವರ್ಗದವರನ್ನು ಮಾತ್ರವಲ್ಲದೆ ರೇಷ್ಮೆ ಕೃಷಿಕರಾದ ರೈತರನ್ನು ಹೊರದೇಶಗಳಿಗೆ ಕಳುಹಿಸಲು ಸರಕಾರದವರು ಉದ್ದೇಶಿಸಿಹವರೇ ?

*

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕೆಲಸದಿಂದ ತೆಗೆಯಲಾದ ಬದಲಿ ನೌಕರರ ಉಪವಾಸ ಮುಷ್ಕರದ ಬಗ್ಗೆ.–

೨೪೭. ಶ್ರೀ ಜಿ. ವಿ. ಮಂಟೂರು.—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೆ ?

(ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೆಲಸದಿಂದ ತೆಗೆಯಲಾದ ಸಾವಿರಾರು ಬದಲೀ ನೌಕರರು ದಿನಾಂಕ ೧೦ನೇ ಮಾರ್ಚಿ ೧೯೮೩ ರಿಂದ ನಗರದ ಕಬ್ಬನ್ ಪಾರ್ಕಿನಲ್ಲಿ ಸರದಿ ಅನ್ನ ಸತ್ಯಾಗ್ರಹ ಆರಂಭಿಸಿರುವುದು ನಿಜವೆ ? ಈ ಬಡ ಕಾರ್ಮಿಕರ ಮೇಲೆ ಬಹಳ ಅನ್ಯಾಯವಾಗಿದೆ, ಇವರನ್ನು ಅಕ್ರಮವಾಗಿ ವಜಾ ಮಾಡಿದ್ದರ ಹಿನ್ನಲೆಯಲ್ಲಿ ಆಡಳಿತ ಮಂಡಳಿಯ ಕೆಲವು ಆಸಕ್ತ ಅಧಿಕಾರಿಗಳ ಕೈವಾಡವಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

(ಆ) ಸಾರಿಗೆ ಸಂಸ್ಥೆಯಲ್ಲಿ ಪ್ರತಿ ವರ್ಷವೂ ಅನೇಕ ಮಾರ್ಗಗಳಲ್ಲಿ ಬಸ್ ಓಡಾಡಿಸುತ್ತಿದ್ದು ಇವುಗಳ ನಿರ್ವಹಣೆಗೆ ಕೆಲಸಗಾರರ ಅಭಾವವಿರುವುದು ನಿಜವೇ ?

(ಇ) ಹಾಗಿದ್ದರೆ ಈ ಜನರನ್ನು ಮಾನವೀಯ ದೃಷ್ಟಿಯಿಂದ ಪುನಃ ಕೆಲಸಕ್ಕೆ ಸೇರಿಸಿ ಕೊಳ್ಳಲಾಗುವುದೇ ?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—

(ಅ) ಕಾರ್ಮಿಕರನ್ನು ಅನ್ಯಾಯವಾಗಿ ವಜಾ ಮಾಡಿರುವುದಿಲ್ಲ ಅಲ್ಲದೇ ಯಾವ ಅಧಿಕಾರಿಗಳ ಕೈವಾಡವೂ ಸಹ ಇದರಲ್ಲಿ ಇರುವುದಿಲ್ಲ.

(ಆ) ಕೆಲಸಗಾರರ ಅಭಾವವೇನೂ ಇರುವುದಿಲ್ಲ.

(ಇ) ಅಭ್ಯರ್ಥಿಗಳ ಹೆಸರುಗಳು ಆಯ್ಕೆ ಪಟ್ಟಿಯಲ್ಲಿ ಇದ್ದಾಗ ಕಾಯಂ ಜಾಗಗಳು ಖಾಲಿ ಆಗುವ ವರೆಗೆ ಅವರನ್ನು ಬದಲಿ ಎಂದು ಕೆಲಸದಲ್ಲಿ ಉಪಯೋಗಿಸಿಕೊಳ್ಳಲು ಅವಕಾಶವಿದೆ. ಆದ್ದರಿಂದ ಕಾನೂನಿನನ್ವಯ ಯಾರು ೨೪೦ ದಿವಸಗಳು ಕೆಲಸವನ್ನು ಈ ಅವಧಿಯಲ್ಲಿ ಮಾಡಿರುವರೊ ಅಂಥವರನ್ನು ಮಾತ್ರ ನೇಮಕಾತಿ ಮಾಡಿಕೊಳ್ಳಲು ಅವಕಾಶವಿದೆ. ಈ ನಿರ್ದಿಷ್ಟ ಪಡಿಸಿದ ದಿವಸಗಳಿಗಿಂತ ಕಡಿಮೆ ದಿನ ಕೆಲಸ ಮಾಡಿರುವವರಿಗೆ ನೇಮಕಾತಿ ಮಾಡಲು ಸಾಧ್ಯವಿಲ್ಲ, ಆದರೆ ಅಂಥವರು ಹೊಸದಾಗಿ ಜಾಹೀರಾತು ಮಾಡಿದಾಗ ಪುನಃ ಅರ್ಜಿ ಸಲ್ಲಿಸಬಹುದು.

* *

* Reply not received

** ಮಾನ್ಯ ಸದಸ್ಯರು ಹಾಜರಿರಲಿಲ್ಲ.